**ದಿನಾಂಕಃ 23.10.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ ಹೆಚ್.ಎಸ್.ಹೆಚ್. ವಕೀಲರಿಂದಃ**

1) ನಾನು ಸಲ್ಲಿಸಿರುವ ಪಹಣಿ ಪತ್ರಿಕೆಗಳಲ್ಲಿ ಪ್ರತಿವಾದಿ ಮತ್ತು ಆತನ ಕುಟುಂಬಕ್ಕೆ ಎಷ್ಟು ವಿಸ್ತೀರ್ಣದ ಆಸ್ತಿ ಇದೆ ಎಂದು ನಮೂದು ಆಗಿಲ್ಲ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ.1 ರ ಕರಾರು ಪತ್ರದಲ್ಲಿನ 1 ರಿಂದ 3 ನೇ ಪುಟಗಳಲ್ಲಿ ನನ್ನ ಸಹಿ ಇರುವುದಿಲ್ಲ. ನಾನು ಕೆಇಬಿ ಇಲಾಖೆ ಜೊತೆ ಒಂದು ಕರಾರು ಮಾಡಿಕೊಂಡು ಅವರಿಂದ 3 ಚೆಕ್ಕುಗಳನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿಗೆ ಮಾಲೀಕಳಾಗಿರುತ್ತೇನೆ ಎಂದು ಸುಳ್ಳು ಅರ್ಜಿಯನ್ನು ಕೆಇಬಿ ಇಲಾಖೆಗೆ ನೀಡಿ ಹಣವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಖಾತೆಗೆ ಸೇರಿದ ಸ್ಟೇಟ್ ಮೆಂಟ್ ಪ್ರತಿಯನ್ನು ಹಾಜರುಪಡಿಸುತ್ತೇನೆ. ಕೆಇಬಿ ಇಲಾಖೆ ಜೊತೆ ಮಾಡಿಕೊಂಡ ಒಪ್ಪಂದದ ದಾಖಲೆಗಳನ್ನು ತರಿಸಲು ನನ್ನದು ತಕರಾರು ಇರುವುದಿಲ್ಲ. ಪ್ರತಿವಾದಿಗಳು ತಮಗೆ ಕೆಇಬಿ ಇಲಾಖೆ ಯಿಂದ ಬರಬೇಕಿದ್ದ ಪರಿಹಾರದ ಹಣವನ್ನು ಅವರ ಬದಲಿಗೆ ನಾನು ಈಗಾಗಲೇ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅದರಂತೆ ಉಳಿದ ಕರಾರಿನ ಹಣವನ್ನು ನನಗೆ ನೀಡಿ ನಿಪಿ.1 ರ ಕರಾರನ್ನು ಮುಕ್ತಗೊಳಿಸುವುದಾಗಿ ಒಪ್ಪಿಕೊಂಡಿದ್ದೆವು ಎಂದರೆ ಸರಿಯಲ್ಲ. ಪ್ರತಿವಾದಿಗಳು ಒಪ್ಪಿದಂತೆ ಹಣವನ್ನು ಕೊಡಲು ತಡ ಆಗಿದ್ದು, ಆದ ಕಾರಣ ನಾನು ಅವರಿಂದ ಹೆಚ್ಚಿಗೆ ಹಣ ಪಡೆಯಲು ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ, ಚನ್ನಪಟ್ಟಣ.**